ಶಿವಮೊಗ್ಗ ಡಿಸ್ಟ್ರಿಕ್ಟ್.

ಅಬ್‌ಸ್ಟ್ರಾಕ್ಟ್ ನೋಟಿಫಿಕೇರ್ಷ, ತಾರೀಖು 24ನೆ ಜುಲೈ 1907.

ಚನ್ನಗಿರಿ ತಾಲ್ಲೂಕು ಸೂಳಿಕೆರೆ ಗ್ರಾಮದಲ್ಲಿ ಇರುವ ವೆ|| ಕೆ. ಶ್ಯಾಮೈಯ್ಯಂಗಾರ್ರಿಂದ ಸರಕಾರಕ್ಕೆ ಬರಬೇಕಾದ ಮೊಬಲಗು ಬಾರದೇ ಇರುವದರಿಂದ ಸದರಿಯವರ ಬಾಬತು ಜವಿನಾನುಗಳು ಸ್ಯ 1907ನೆ ಇಸವಿ ಆಗಸ್ಟು 1ನೆ ತಾರೀಖು ಮೈಸೂರು ಗೆಜೆಟಿನ 11ನೆ ಭಾಗದ 363, 364ನೆ ಸಂಪುಟದಲ್ಲಿ ಫಾಯಿಷ್ ಆಗಿರುವ ಡೀಟೇಲ್ಡ್ ನೋಟಿಫಿಕೇರ್ಷನಲ್ಲಿ ನಮೂದಿಸಿ ಇರುವ ತಪಶೀಲ್ ಮೇರೆ ಇರುವವುಗಳನ್ನು 14—9—1907ನೆ ದಿವಿ 11 ಘಂಟೆಗೆ ಸೂಳಿಕೆರೆ ಮೊಕ್ತಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ.

ಎ. ವೇದಾಂತದೇಸಿಗಂ ಐಯ್ಯಂಗಾರ್,
ಥರ್ ಡೆಪ್ಯೂಟಿ ಕಮಿಷನರ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1907—08ನೆ ಮಿ|| ಅರ್ಜೀ ನಂಬರ್ 40.

ಬೆಂಗಳೂರು ತಾಲ್ಲೂಕು ಎಲಹಂಕದಲ್ಲಿದ್ದು ಮೃತಪಟ್ಟ ಕರಗಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ನಂಜಪ್ಪ, 2ನೆ ಪುಟ್ಟಪ್ಪ, ಮೈನರ್ ಗಾರ್ಡಿಯರ್ ದೊಡ್ಡ ತಂದೆ ಸಂಜೀವಪ್ಪ ಮೃತಪಟ್ಟ ಸದರೀ ಕರಗಪ್ಪನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಎಲಹಂಕದ ಸ್ಥಳದ ನಂಜಪ್ಪ ಮತ್ತು ಪುಟ್ಟಪ್ಪನು ಡಿಟೋ ವಾಸಸ್ಥರಾಗಿ ಮೃತಪಟ್ಟ ಕರಗಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 497—13—6 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ನಂಜಪ್ಪ ಮತ್ತು ಪುಟ್ಟಪ್ಪನವರ ಅರ್ಜಿಯನ್ನು ಸ್ಯ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರದಲ್ಲೂ ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರಗಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1907—08ನೆ ಇಸವಿ ಮಿ|| ಅರ್ಜೀ ನಂಬರ್ 71.

ಮೃತಪಟ್ಟ ದೊಡ್ಡ ಬಳ್ಳಾಪುರದ ವಾಸುದೇವಶಾಸ್ತ್ರಿಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಸಿದ್ದಿಕಟ್ಟೆಲಿರುವ 1ನೆ ಸುಬ್ರಹ್ಮಣ್ಯಶಾಸ್ತ್ರಿ, 2ನೆ ಶೇಷಶಾಸ್ತ್ರಿ, ಮೃತಪಟ್ಟ ಸದರೀ ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ 1ನೆ ಸುಬ್ರಹ್ಮಣ್ಯಶಾಸ್ತ್ರಿ, 2ನೆ ಶೇಷಶಾಸ್ತ್ರಿ ಎಂಬವರು ಡಿಟೋ ವಾಸಸ್ಥರಾಗಿ ಮೃತಪಟ್ಟ ದೊಡ್ಡಬಳ್ಳಾಪುರದ ವಾಸುದೇವಶಾಸ್ತ್ರಿಗಳ ಜಿಂದಗಿ ಬಗ್ಯಾಗಿ ಬರತಕ್ಕ 3,500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಜಾಸ್ತುದಾರರಾದ ಸುಬ್ರಹ್ಮಣ್ಯಶಾಸ್ತ್ರಿ ಮತ್ತು ಶೇಷಶಾಸ್ತ್ರಿಗಳ ಅರ್ಜಿಯನ್ನು ಸ್ಯ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಾಸುದೇವಶಾಸ್ತ್ರಿಗಳ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1907—08ನೆ ಇಸವಿ ಮಿ|| ಅರ್ಜೀ ನಂಬರ್ 79.

ಬೆಂಗಳೂರು ಕೀಗೇಬೇಲಿಯಲ್ಲಿ ವಾಸವಾಗಿದ್ದು ಮೃತಪಟ್ಟ ಮಂಡಿದಾರ್ ಎಲ್. ಸೆಟ್ಟ್ವಾಜೀರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ವೆಂಕಟರಾವ್ ಉರಫ್ ಬಾಪೂರಾವ್, 2 ವಾಸುದೇವರಾವ್, ಮೈನರ್ ಗಾರ್ಡಿಯರ್ ವೆಂಕಟರಾವ್ ಉರಫ್ ಬಾಪೂರಾವ್ ಮೃತಪಟ್ಟ ಸದರೀ ಸೆಟ್ಟ್ವಾಜೀರಾಯರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವೆಂಕಟರಾವ್ ಉರಫ್ ಬಾಪೂರಾವ್ ಮತ್ತು ವಾಸುದೇವರಾವ್ ಎಂಬುವರು ಡಿಟೋ ವಾಸಸ್ಥರಾಗಿ ಮೃತಪಟ್ಟ ಸೆಟ್ಟ್ವಾಜೀ ರಾಯರ ಜಿಂದಗಿ ಬಗ್ಯಾಗಿ ಬರತಕ್ಕ 660 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರಿ ದರಖಾಸ್ತುದಾರರಾದ ವೆಂಕಟರಾವ್ ಉರಫ್ ಬಾಪೂರಾವ್ ಮತ್ತು ವಾಸುದೇವರಾಯರ ಅರ್ಜಿಯನ್ನು ಸ್ಯ 1907ನೆ ಇಸವಿ ಆಗಸ್ಟು ತಿಂಗಳು 16ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೆಟ್ಟ್ವಾಜೀರಾಯರ ಆಸ್ತಿಗೆ ಹಕ್ಕುದಾರರಾದ ವಿಶಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1907ನೆ ಇಸವಿ ಆಗಸ್ಟು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.